| | | | | | |
|---|---|---|---|---|---|
| **News Date** | 22-07-2017 | **Media Type** | Newspapers | **Publication Type** | Regional Daily Newspaper |
| **Publication** | Prajavani | **Language** | Kannada | **Page No** | 9 |
| **Height** | 10 | **Cols** | 3 | | |
| **Agency** | Bureau | | | | |
| **Edition** | Bangalore | | | | |

# ಕರ್ಣಾಟಕ ಬ್ಯಾಂಕ್ ಮೆಟ್ ಲೋನ್, ಲೈಫ್ ಸುರಕ್ಷಾ ಅನಾವರಣ

■ **ವಿಕ ಸುದ್ದಿಲೋಕ** ಮಂಗಳೂರು



ಕರ್ಣಾಟಕ ಬ್ಯಾಂಕ್ ತನ್ನ ಜಿವ ವಿಮಾ ಪಾಲುದಾರ ಸಂಸ್ಥೆ ಮೇ. ಪಿಎನ್‌ಬಿ ಮೆಟ್ ಲೈಫ್ ಸಹಯೊಗದಲ್ಲಿ ಶುಕ್ರವಾರ ಮೆಟ್ ಲೊನ್ ಮತ್ತು ಲೈಫ್ ಸುರಕ್ಷಾ (ಎಂಎಲ್‌ಎಲ್‌ಎಸ್) ಯೋಜನೆಯನ್ನು ಅನಾವರಣಗೊಳಿಸಿದೆ.

ಇದರಿಂದ ಗ್ರಾಹಕರ ಸಿಂಗಲ್ ಪ್ರೀಮಿಯಂ ಪ್ಲಾನ್ ಸಾಲದ ಹೊಣೆಗಾರಿಕೆಯನ್ನು ಒಳಗೊಳ್ಳಲಿದೆ. ಹದಿನೈದು ವರ್ಷದ ಪಾಲುದಾರಿಕೆಯನ್ನು ಹೊಂದಿರುವ ಈ ಸಂದರ್ಭದಲ್ಲಿ, ಕರ್ಣಾಟಕ ಬ್ಯಾಂಕ್‌ನ ಉದ್ಯೊಗಿಗಳಿಗೆ ಕೆಬಿಎಲ್ ಎಂಎಲ್‌ಎಲ್ ಅಪ್ಲಿಕೇಶನ್‌ನ್ನು ಪರಿಚಯಿಸಿದೆ. ಈ ಮೂಲಕ ತಮ್ಮ ಸಾಲಗಾರರ ಸಾಲದ ಹೊಣೆಗಾರಿಕೆಯ ಆಧಾರದ ಮೆಲೆ ತಕ್ಷಣ ವಿಮೆ ಕವರ್ ಮತ್ತು ಪ್ರಿಮಿಯಂ ಲೆಕ್ಕಾಚಾರ ಮಾಡಲು ಅನುಕೂಲವಾಗಲಿದೆ.

ಕರ್ಣಾಟಕ ಬ್ಯಾಂಕ್‌ನ ಆಡಳಿತ ನಿರ್ದೇಶಕ ಎಂ.ಎಸ್. ಮಹಾಬಲೇಶ್ವರ ಮತ್ತು ಪಿಎನ್‌ಬಿ ಮೆಟ್ ಲೈಫ್ ನಿರ್ದೇಶಕ ಸಮಿರ್ ಬನ್ಸಾಲ್ ಸಾಲದ ಉತ್ಪನ್ನ ಮತ್ತು ಮೊಬೈಲ್ ಅಪ್ಲಿಕೆಶನ್ ಅನಾವರಣಗೊಳಿಸಿದರು. ಬ್ಯಾಂಕ್‌ನ ಮುಖ್ಯ ಪಹಾ ಪ್ರಬಂಧಕ ಎಂ. ರಾಘವೆಂದ್ರ ಭಟ್, ಮಹಾ ಪ್ರಬಂಧಕರಾದ ಚಂದ್ರಶೇಖರ ರಾವ್ ಬಿ., ಸುಭಾಶ್ಚಂದ್ರ ಪುರಾಣಿಕ್, ಬಾಲಚಂದ್ರ ವೈ.ವಿ., ಮುರಳಿಧರ ಕೃಷ್ಣ ರಾವ್, ನಾಗರಾಜ ರಾವ್ ಬಿ., ಮೆಟ್ ಲೈಫ್ ಸಯಾಕಕ ನಿರ್ದೇಶಕ ಸಾಯಿ ಚಂದ್ರಶೆಖರ್ ರೆಡ್ಡಿ ಉಪಸ್ಥಿತರಿದ್ದರು.

ಹೊಸ ಉತ್ಪನ್ನ ಬ್ಯಾಂಕಿನ ಎಲ್ಲಾ 769 ಶಾಖೆಗಳಲ್ಲಿನ ಗ್ರಾಹಕರಿಗೆ ಲಭ್ಯವಾಗುತ್ತದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.